
ಕೃಷ್ಣಮೂರ್ತಿ ಪ್ರತಿಷ್ಠಾನ ಭಾರತ

# ಸಹ ಪಯಣ

ಬೆಂಗಳೂರು ಶಿಕ್ಷಣ ಕೇಂದ್ರದ ತ್ರೈಮಾಸಿಕ ವಾರ್ತಾಪತ್ರ

ಸಂಪುಟ ೩೨ ನವೆಂಬರ್ ೨೦೨೪ ಸಂಚಿಕೆ ೨



ಜೆ ಕೃಷ್ಣಮೂರ್ತಿ

# ಎಲ್ಲರಿಗೂ ಬೇಕಾದ ಕೃಷ್ಣಮೂರ್ತಿ

ನಾನು ಹೇಳಿದ್ದನ್ನು ನಿಜವೆಂದು ಸುಮ್ಮನೆ ಒಪ್ಪಿಕೊಂಡುಬಿಡಬೇಡಿ. ನಾನು ಏನು ಪ್ರಯೋಗ ಮಾಡಿದ್ದೇನೆ ಅದನ್ನು ನಿಮಗೆ ಹೇಳುತ್ತಿದ್ದೇನೆ. ಮನೋವೈಜ್ಞಾನಿಕವಾಗಿಯೂ ಅದು ಸತ್ಯವೆಂದು ತೋರುತ್ತದೆ. ಏಕೆಂದರೆ ಸ್ವಯಂ ಶಿಸ್ತು ಎಂದರೆ ಮನಸ್ಸು ಯಾವುದೋ ಒಂದು ವಿಚಾರ, ಆದರ್ಶ, ನಂಬಿಕೆಯ ಗೂಟಕ್ಕೆ ಕಟ್ಟಿ ಹಾಕಲ್ಪಟ್ಟದ್ದು. ನಿಬಂಧನೆಯ ಸೂತ್ರಕ್ಕೆ ಒಳಪಟ್ಟ ಮನಸ್ಸು; ಹೇಗೆಂದರೆ ಒಂದು ಪ್ರಾಣಿಯನ್ನು ಹಗ್ಗದ ಸಹಾಯದಿಂದ ಗೂಟಕ್ಕೆ ಕಟ್ಟಿ ಹಾಕಿದರೆ ಆ ಪ್ರಾಣಿ ಹಗ್ಗದ ಉದ್ದ ಎಷ್ಟಿದೆಯೋ ಅಷ್ಟರೊಳಗೆ ಅತ್ತಿಂದಿತ್ತ ಓಡಾಡುತ್ತದೆ. ಅದೇ ರೀತಿಯಲ್ಲಿ ಒಂದು ನಂಬಿಕೆ ಗೂಟಕ್ಕೆ ಕಟ್ಟಿದ ಮತ್ತು ಸ್ವಯಂ ಶಿಸ್ತಿನಿಂದ ವಿಕೃತಗೊಂಡ ಮನಸ್ಸು ಆ ನಿಬಂಧನೆಯ ಮಿತಿಯೊಳಗೇ ವಿಹರಿಸುತ್ತದೆ. ಹೀಗಾಗಿ ಅಂಥ ಮನಸ್ಸು ಮನಸ್ಸೇ ಅಲ್ಲ. ಅದು ಆಲೋಚನೆ ಮಾಡಲಾರದ ಮನಸ್ಸು, ಅದು ಗುರಿ ಕಂಬ ಹಾಗೂ ತನಗೆ ಸಾಧ್ಯವಾಗಬಹುದಾದ ಎಟುಕಿನ ಮಿತಿಯೊಳಗೆ ಹೊಂದಾಣಿಕೆ ಮಾಡಿಕೊಳ್ಳಬಹುದು; ಆದರೆ ಅಂಥ ಮನಸ್ಸು ಅಂಥ ಹೃದಯ ನಿಜಕ್ಕೂ ಯೋಚಿಸಲಾರದು, ಭಾವಿಸಲಾರದು.

ಮನಸ್ಸು ಮತ್ತು ಹೃದಯ ಚಿಂತನೆಯನ್ನು, ವಾತ್ಸಲ್ಯವನ್ನು ನಿರಾಕರಿಸುವ ಮೂಲಕ ಶಿಸ್ತಿಗೆ ಒಳಪಟ್ಟು ವಿಕಲಗೊಂಡಿವೆ ಮತ್ತು ವಿರೂಪಗೊಂಡಿವೆ. ಆದುದರಿಂದ ನೀವು ನಿಮ್ಮ ಭಾವನೆ ಮತ್ತು ವಿಚಾರಗಳಿಗೆ ಯಾವುದೇ ನಿರ್ದಿಷ್ಟ ದಿಕ್ಕಿನಲ್ಲಿ ಮಾರ್ಗದರ್ಶನ ಮಾಡದೆ ಅವು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ಅವಲೋಕಿಸ ಬೇಕು. ಆ ಬಗ್ಗೆ ಜಾಗೃತರಾಗಬೇಕು. ಮೊದಲಿಗೆ, ನೀವು ಅವುಗಳಿಗೆ ಮಾರ್ಗದರ್ಶನ ಮಾಡುವುದಕ್ಕೆ ಮುನ್ನ, ಅವು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ಕಂಡು ಹಿಡಿಯಿರಿ. ನೀವು ಭಾವನೆ ಮತ್ತು ಆಲೋಚನೆಯನ್ನು ಬದಲಿಸುವ ಮುನ್ನ, ಅವುಗಳ ಕಾರ್ಯ ಶೈಲಿಯನ್ನು ಕಂಡುಕೊಳ್ಳಿ. ಅವುಗಳ ಬಯಕೆ ಮತ್ತು ಬಯಕೆಯು ನಿಗದಿಪಡಿಸಿದ ಸಾರ್ಥಕ್ಯದ ಕ್ಷಣಗಳ ಮಿತಿಗಳಿಗೆ ಸತತವಾಗಿ ಹೊಂದಿಕೊಳ್ಳಲು ಯತ್ನಿಸುತ್ತಿವೆ ಎಂಬುದು ನಿಮಗೇ ತಿಳಿಯುತ್ತದೆ. ಜಾಗೃತಿಯಲ್ಲಿ, ಎಚ್ಚರದಲ್ಲಿ ಯಾವುದೇ ಶಿಸ್ತು ಇರುವುದಿಲ್ಲ.

ಕೃತಿ: ಎಲ್ಲರಿಗೂ ಬೇಕಾದ ಕೃಷ್ಣಮೂರ್ತಿ
ಮೂಲ: THE ESSENTIAL KRISHNAMURTI OJAI, 18 JUNE 1934
ಅನುವಾದ: ಮಹಾಬಲೇಶ್ವರ ರಾವ್



# ಕ್ರಾಂತಿ ವರ್ತಮಾನದಲ್ಲಿ ಮಾತ್ರ ಸಾಧ್ಯ.

ಯಾವುದು ಇದೆಯೋ ಅದನ್ನು ಪರಿವರ್ತಿಸಲು ಕಾಲ ಒಂದು ಸಾಧನವೆಂದು ಭಾವಿಸಿ, ಅದನ್ನು ಅವಲಂಬಿಸುವ ಪ್ರಕ್ರಿಯೆ ಹುಸಿಯಾದುದು ಎಂಬುದನ್ನು ನೀವು ಕಂಡು ಕೊಂಡರೆ, ಅಲ್ಲಿಂದಾಚೆಗೆ ವಾಸ್ತವವಾಗಿ ಇರುವುದನ್ನು ಪರಿವರ್ತಿಸಲು ಕಾಲದ ಮೇಲೆ ಅವಲಂಬಿತರಾಗುವುದಿಲ್ಲ; ಆಗ ವಾಸ್ತವವಾಗಿ ಇರುವುದನ್ನು ಮುಖಾಮುಖಿ ಎದುರಿಸುತ್ತೀರಿ. ಮತ್ತು ಯಾವುದು ಇದೆಯೋ ಅದನ್ನು ಅರಿತು ಕೊಳ್ಳಲು ನಿಮಗೆ ಆಸಕ್ತಿಯಿರುವುದರಿಂದ, ಸಹಜವಾಗಿಯೇ ನಿಮ್ಮ ಮನಸ್ಸು ಪ್ರಶಾಂತವಾಗಿರುತ್ತದೆ. ಚುರುಕಾಗಿದ್ದರೂ ನಿಷ್ಪ್ರಯತ್ನ ಸ್ಥಿತಿಯಲ್ಲಿರುವ ಅಂತಹ ಮನಸ್ಸಿನಲ್ಲಿ ಅರಿವು ಮೂಡುತ್ತದೆ. ಎಲ್ಲಿಯವರೆಗೆ ಮನಸ್ಸು ಘರ್ಷಣೆಯಲ್ಲಿರುತ್ತದೆಯೋ, ದೋಷಾರೋಪಣೆ ಮಾಡುತ್ತಿರುತ್ತದೆಯೋ, ನಿರೋಧಿಸುತ್ತಿರುತ್ತದೆಯೋ, ನಿಂದಿಸುತ್ತಿರುತ್ತದೆಯೋ, ಅಲ್ಲಿಯವರೆಗೆ ಅರಿವು ಸಾಧ್ಯವಿಲ್ಲ. ನಾನು ನಿಮ್ಮನ್ನು ಅರಿತುಕೊಳ್ಳಬೇಕಾದರೆ, ನಿಮ್ಮನ್ನು ನಿಂದಿಸಬಾರದು ಎಂಬುದು ಸ್ಪಷ್ಟವಾದ ಸಂಗತಿ. ಅಂತಹ ಪ್ರಶಾಂತವಾದ, ನಿಶ್ಚಲವಾದ ಮನಸ್ಸು ಪರಿವರ್ತನೆಯನ್ನು ಉಂಟುಮಾಡುತ್ತದೆ. ಯಾವಾಗ ಮನಸ್ಸು ವಾಸ್ತವವಾಗಿ ಇರುವುದನ್ನು ನಿರೋಧಿಸುವುದಿಲ್ಲವೋ, ಅದರಿಂದ ತಪ್ಪಿಸಿಕೊಂಡು ಹೋಗುವುದಿಲ್ಲವೋ, ಅದನ್ನು ತ್ಯಜಿಸುವುದಿಲ್ಲವೋ ಅಥವಾ ಅದರ ಮೇಲೆ ದೋಷಾರೋಪಣೆ ಮಾಡುವುದಿಲ್ಲವೋ, ಸುಮ್ಮನೆ ಪ್ರಯತ್ನರಹಿತ ಅರಿವಿನ ಸ್ಥಿತಿಯಲ್ಲಿರುತ್ತದೆಯೋ, ಆಗ ಮನಸ್ಸಿನ ಆ ನಿಷ್ಪ್ರಯತ್ನ ಸ್ಥಿತಿಯಲ್ಲಿ ನೀವು ನಿಜವಾಗಿಯೂ ಸಮಸ್ಯೆಯೊಳಕ್ಕೆ ಆಳವಾಗಿ ಇಳಿದರೆ, ಒಂದು ಪರಿವರ್ತನೆ ಉಂಟಾಗುವುದನ್ನು ಕಾಣುವಿರಿ.

ಕ್ರಾಂತಿ ವರ್ತಮಾನದಲ್ಲಿ ಮಾತ್ರ ಸಾಧ್ಯ. ಭವಿಷ್ಯದಲ್ಲಲ್ಲ; ಪುನರುಜ್ಜೀವನ ಇಂದು ಸಂಭವಿಸಬೇಕು, ನಾಳೆಯಲ್ಲ. ನಾನು ಹೇಳುತ್ತಿರುವುದರ ಬಗ್ಗೆ ನೀವು ಪ್ರಯೋಗ ಮಾಡಿ ನೋಡಿದರೆ, ಆಗ ತತ್‌ಕ್ಷಣವೇ ಪುನರುಜ್ಜೀವನ, ಹೊಸತನ, ಒಂದು ತಾಜಾಗುಣ ಉಂಟಾಗುವುದನ್ನು ಕಾಣುವಿರಿ; ಏಕೆಂದರೆ, ಯಾವಾಗ ಮನಸ್ಸಿಗೆ ಆಸಕ್ತಿ ಇದೆಯೋ, ಯಾವಾಗ ಅದು ಆಶಿಸುತ್ತದೆಯೋ ಅಥವಾ ಅರಿತುಕೊಳ್ಳಬೇಕೆಂಬ ತೀವ್ರ ಇಚ್ಛೆಯನ್ನು ಹೊಂದಿದೆಯೋ, ಆಗ ಮನಸ್ಸು ನಿಶ್ಚಲವಾಗಿರುತ್ತದೆ. ನಮ್ಮಲ್ಲನೇಕರಿಗೆ ಇರುವ ಕಷ್ಟವೇನೆಂದರೆ, ನಮಗೆ ಅರಿಯಬೇಕೆಂಬ ತೀವ್ರ ಇಚ್ಛೆಯಿಲ್ಲ; ಹಾಗೆ ನಾವು ಅರಿತರೆ, ಆ ಅರಿವು ನಮ್ಮ ಜೀವನದಲ್ಲಿ ಒಂದು ಕ್ರಾಂತಿಕಾರಕ ಕ್ರಿಯೆಯನ್ನು ಉಂಟು ಮಾಡಿಬಿಡಬಹುದೆಂದು ಭಯಪಡುತ್ತೇವೆ; ಆದ್ದರಿಂದ ಅಂತಹ ಅರಿವನ್ನು ನಿರೋಧಿಸುತ್ತೇವೆ. ಕಾಲ ಅಥವಾ ಧ್ಯೇಯವನ್ನು ಕ್ರಮ ಕ್ರಮವಾದ ಪರಿವರ್ತನೆಯ ಸಾಧನವನ್ನಾಗಿ ಉಪಯೋಗಿಸುವಾಗ ಸ್ವರಕ್ಷಣೆಯ ತಂತ್ರ ಕಾರ್ಯ ಪ್ರವೃತ್ತವಾಗಿರುತ್ತದೆ.

ಹೀಗೆ ಪುನರುಜ್ಜೀವನವೆಂಬುದು ವರ್ತಮಾನದಲ್ಲಿ ಮಾತ್ರ ಸಾಧ್ಯ, ಭವಿಷ್ಯದಲ್ಲಲ್ಲ, ನಾಳೆಯಲ್ಲ. ಯಾವ ಮನುಷ್ಯ ಸಂತೋಷವನ್ನು ಪಡೆಯಲು, ಸತ್ಯವನ್ನು ಅಥವಾ ದೇವರನ್ನು ಅರಿಯಲು, ಕಾಲವನ್ನು ಸಾಧನವನ್ನಾಗಿ ಬಳಸಬಹುದೆಂದು ಅದರ ಮೇಲೆ ಅವಲಂಬಿತನಾಗಿರುತ್ತಾನೆಯೋ ಅಂತಹವನು ಸುಮ್ಮನೆ ತನ್ನನ್ನು ತಾನು ವಂಚಿಸಿ ಕೊಳ್ಳುತ್ತಿದ್ದಾನೆ; ಅವನು ಅಜ್ಞಾನದಲ್ಲಿ ಜೀವಿಸುತ್ತಿದ್ದಾನೆ, ಆದ್ದರಿಂದ ಘರ್ಷಣೆಯಲ್ಲಿ ಜೀವಿಸುತ್ತಿದ್ದಾನೆ. ಯಾವ ಮನುಷ್ಯ ಕಷ್ಟದಿಂದ ಹೊರಬರಲು ಕಾಲ ಸರಿಯಾದ ಮಾರ್ಗವಲ್ಲ

ಎಂಬುದನ್ನು ಕಾಣುತ್ತಾನೆಯೋ, ಆದಕಾರಣ, ಹುಸಿಯಾದುದರಿಂದ ಬಿಡಿಸಿಕೊಂಡಿರುತ್ತಾನೆಯೋ, ಸಹಜವಾಗಿಯೇ ಅಂತಹ ಮನುಷ್ಯನು ಅರಿತುಕೊಳ್ಳ ಬೇಕೆಂಬ ಉದ್ದೇಶವನ್ನು ಹೊಂದಿದ್ದಾನೆ; ಆದ್ದರಿಂದ ಅವನ ಮನಸ್ಸು ಸ್ವಾಭಾವಿಕವಾಗಿ ತನ್ನಷ್ಟಕ್ಕೆ ತಾನೇ, ಯಾವ ಬಲಾತ್ಕಾರವೂ ಇಲ್ಲದೆ, ಅಭ್ಯಾಸವೂ ಇಲ್ಲದೆ, ಪ್ರಶಾಂತವಾಗಿರುತ್ತದೆ. ಯಾವಾಗ ಮನಸ್ಸು ನಿಶ್ಚಲವಾಗಿದೆಯೋ, ಪ್ರಶಾಂತವಾಗಿದೆಯೋ, ಯಾವುದೇ ಉತ್ತರ ಅಥವಾ ಪರಿಹಾರಕ್ಕಾಗಿ ಹುಡುಕುತ್ತಿಲ್ಲವೋ, ನಿರೋಧಿಸುತ್ತಿಲ್ಲವೋ, ಹಾಗೂ ತಪ್ಪಿಸಿಕೊಳ್ಳುತ್ತಲೂ ಇಲ್ಲವೋ, ಆಗ ಮಾತ್ರ ಪುನರುಜ್ಜೀವನ ಸಾಧ್ಯ. ಏಕೆಂದರೆ ಆಗ ಮನಸ್ಸು ಯಾವುದು ಸತ್ಯವೋ ಅದನ್ನು ಗ್ರಹಿಸಲು ಸಮರ್ಥವಾಗುತ್ತದೆ; ಸತ್ಯ ಮಾತ್ರ ಬಿಡುಗಡೆಯನ್ನು ಕೊಡುತ್ತದೆಯೇ ಹೊರತು ಬಿಡುಗಡೆಗಾಗಿ ನೀವು ಮಾಡುವ ಪ್ರಯತ್ನವಲ್ಲ.

*ತಾನು ಎಂತಹ ಸ್ಥಿತಿಯಲ್ಲಿ ಇದ್ದೇನೆಂಬುದನ್ನು ಅರಿತುಕೊಂಡ ಕೂಡಲೇ ಬಿಡುಗಡೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ; ಆದರೆ ತನ್ನ ಸ್ಥಿತಿ ಮತ್ತು ಹೋರಾಟಗಳನ್ನು ಅರಿತುಕೊಂಡಿಲ್ಲದಿರುವ ಮನುಷ್ಯನು ತಾನು ಇರುವ ಸ್ಥಿತಿಯಿಂದ ಭಿನ್ನವಾಗಿರಲು ಪ್ರಯತ್ನಿಸುತ್ತಾನೆ. ಇದು ಅಭ್ಯಾಸಕ್ಕೆ ಎಡೆಮಾಡಿಕೊಡುತ್ತದೆ.*

ಜೆ ಕೃಷ್ಣಮೂರ್ತಿ

ಕೃತಿ: ಎಲ್ಲರಿಗೂ ಬೇಕಾದ ಕೃಷ್ಣಮೂರ್ತಿ
ಮೂಲ: THE ESSENTIAL KRISHNAMURTI - Part 2
ಅನುವಾದ: ಮಹಾಬಲೇಶ್ವರ ರಾವ್



**ಪ್ರಶ್ನಾರ್ಥಿ : ಭಯವನ್ನು ಆಧರಿಸಿದ ಸಮಾಜದಲ್ಲಿ ಬೆಳೆದು ಬಂದಿರುವುದರಿಂದಾಗಿ ಭಯದಿಂದ ನಾವು ಬಿಡುಗಡೆ ಹೊಂದುವುದು ಹೇಗೆ ಸಾಧ್ಯ?**

ಕೃಷ್ಣಮೂರ್ತಿ : ನೀವು ಹೆದರಿದ್ದೀರಿ ಎಂಬುದರ ಅರಿವು ನಿಮಗಿದೆಯಾ? ಹಾಗಿದ್ದರೆ, ಭಯದಿಂದ ನೀವು ಹೇಗೆ ಮುಕ್ತರಾಗುತ್ತೀರಿ? ನೀವು ಮತ್ತು ನಾನು ಸೇರಿ ಕಂಡುಕೊಳ್ಳಬೇಕು. ಆದ್ದರಿಂದ ನನ್ನ ಜೊತೆ ಸೇರಿ ಆಲೋಚನೆ ಮಾಡಿ. ನೀವು ಹೆದರಿದ್ದೀರಿ ಎಂಬ ಅರಿವು ನಿಮಗಿರುವಾಗ, ನಿಜಕ್ಕೂ ನೀವೇನು ಮಾಡುತ್ತೀರಿ? ಅದರಿಂದ ದೂರ ಓಡುತ್ತೀರಿ ಅಲ್ಲವೇ? ನೀವು ಒಂದು ಪುಸ್ತಕ ಕೈಗೆತ್ತಿಕೊಳ್ಳುತ್ತೀರಿ ಅಥವಾ ವಾಯುವಿಹಾರಕ್ಕೆ ಹೋಗುತ್ತೀರಿ; ಅದನ್ನು ಮರೆಯಲು ಪ್ರಯತ್ನಿಸುತ್ತೀರಿ. ನಿಮಗೆ ನಿಮ್ಮ ಹೆತ್ತವರ ಮತ್ತು ಸಮಾಜದ ಭಯ; ಆ ಭಯದ ಪ್ರಜ್ಞೆ ನಿಮ್ಮಲ್ಲಿದೆ. ಅದನ್ನು ಹೇಗೆ ಪರಿಹರಿಸಿಕೊಳ್ಳಬೇಕು ಎಂದು ನಿಮಗೆ ತಿಳಿದಿಲ್ಲ. ಆ ಭಯವನ್ನು ನೋಡಲೂ ನಿಮಗೆ ತುಂಬಾ ಭಯ. ನೀವು ಅದರಿಂದ ದೂರ ಬೇರೆ ಬೇರೆ ದಿಕ್ಕುಗಳತ್ತ ಓಡುತ್ತೀರಿ. ಆದುದರಿಂದಲೇ ನೀವು ಅಧ್ಯಯನ ಮಾಡುತ್ತಾ ಇರುತ್ತೀರಿ. ಪರೀಕ್ಷೆ ಪಾಸು ಮಾಡುತ್ತೀರಿ. ಅನಿವರ್ಯವಾಗಿ ಭಯವನ್ನು ಎದುರಿಸಿ ಏನಾದರೂ ಮಾಡುವ ತನಕ ಇದನ್ನೆಲ್ಲ ಮಾಡುತ್ತಲೇ ಇರುತ್ತೀರಿ.

ನೀವು ಸತತವಾಗಿ ನಿಮ್ಮ ಸಮಸ್ಯೆಯಿಂದ ಪಲಾಯನ ಮಾಡುತ್ತೀರಿ. ಆದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ನೀವು ಅದನ್ನು ಎದುರಿಸಬೇಕು. ಈಗ, ನೀವು ನಿಮ್ಮ ಭಯವನ್ನು ನೋಡುವಿರಾ? ಒಂದು ಪಕ್ಷಿಯನ್ನು ಪರೀಕ್ಷಿಸಬೇಕಾದರೆ, ಅದರ ರೆಕ್ಕೆಗಳ, ಕಾಲುಗಳ, ಕೊಕ್ಕಿನ ಆಕಾರವನ್ನು ಪರಿಶೀಲಿಸಬೇಕು. ನೀವು ಅದರ ಸಮೀಪಕ್ಕೆ ಹೋಗಬೇಕು. ಅಲ್ಲವೇ? ಅಂತೆಯೇ, ನೀವು ಭಯಪಟ್ಟಿದ್ದರೆ, ನಿಮ್ಮ ಭಯವನ್ನು ತೀರ ಸಮೀಪದಿಂದ ಗಮನಿಸಬೇಕು. ಅದರಿಂದ ದೂರ ಓಡಿದರೆ ಭಯದ ಪ್ರಮಾಣವನ್ನು ಹೆಚ್ಚಿಸುತ್ತೀರಿ. ಉದಾಹರಣೆಗೆ, ನೀವು ನಿಜಕ್ಕೂ ಪ್ರೀತಿಸುವ ಒಂದು ಕರ್ಯಕ್ಕೆ ನಿಮ್ಮ ಜೀವ ತೆರಬೇಕೆಂದಿದ್ದೀರಿ. ಆದರೆ ನೀವು ಅದನ್ನು ಮಾಡಕೂಡದು. ಮಾಡಿದರೆ ಭಯಂಕರವಾದ ಪರಿಣಾಮವಾಗುತ್ತದೆ ಎಂದು ನಿಮ್ಮ ಹೆತ್ತವರು ಹೇಳಿ ಹೆದರಿಸುತ್ತಾರೆ. ನಿಮಗೆ ಹಣ ಕೊಡುವುದಿಲ್ಲ ಎನ್ನುತ್ತಾರೆ. ನೀವು ಭಯಪಡುತ್ತೀರಿ. ನಿಮಗೆ ಎಷ್ಟು ಭಯವೆಂದರೆ ನಿಮ್ಮ ಭಯವನ್ನು ಪರಿಶೀಲಿಸುವುದಿಲ್ಲ. ಶರಣಾಗುತ್ತೀರಿ, ಭಯ ಮುಂದುವರಿಯುತ್ತದೆ.

ಕೃತಿ: "ಬದುಕಿಗೆ ಅಭಿಮುಖವಾಗಿ"

ಮೂಲ: Life Ahead ಅನುವಾದ: ಮಹಾಬಲೇಶ್ವರ ರಾವ್







## Retreat Schedule 2024 - 2025

| | | |
|---|---|---|
| Dec 5 | - 8 | Silence, Stillness, Meditation |
| Jan 16 | - 19 | Significance of ‘Living the Here and Now’ in daily life |
| Feb 6 | - 9 | Awakening ‘INTELLIGENCE’ in the age of ‘AI’? |
| Mar 6 | - 9 | Exploring Anxiety, Stress & inner Conflict |
| April 10 | - 13 | Why do I get ANGRY? |




THINK ON THESE THINGS

J Krishnamurti

ನಿಮ್ಮ ಪ್ರೀತಿಯ ಕೆಲಸ ಯಾವುದೆಂದು ಕಂಡುಕೊಳ್ಳಲು ಅಪಾರ ವಿವೇಕ ಬೇಕು. ಎಕೆಂದರೆ ಆಗ ನೀವು ಹೊಟ್ಟೆಪಾಡಿಗಾಗಿ ಯಾವುದೋ ಒಂದು ಕೆಲಸ ಮಾಡಲು ನಿರಾಕರಿಸಬೇಕು, ಈ ಕೊಳಕು ಸಮಾಜದ ಸಂಗಡ ಹೊಂದಾಣಿಕೆ ಮಾಡಿಕೊಳ್ಳಲು ಒಪ್ಪಬಾರದು. ಆ ರೀತಿಯ ಒಪ್ಪಂದಗಳನ್ನು ಮಾಡಿಕೊಂಡರೆ, ನಿಮ್ಮ ಒಲವು ಯಾವ ಕೆಲಸದ ಮೇಲೆ ಇದೆಯೆಂದು ತಿಳಿಯುವುದೇ ಇಲ್ಲ. ಆದರೆ, ನೀವು ಭಯದಿಂದ ಬಿಡುಗಡೆ ಪಡೆದಾಗ, ತಂದೆ-ತಾಯಿ, ಅಧ್ಯಾಪಕರು, ಹುಸಿ ಒತ್ತಾಯಗಳನ್ನು ತರುವ ಸಮಾಜ ಇವೆಲ್ಲದರಿಂದ ಮುಕ್ತರಾಗಿ, ಸಂಪ್ರದಾಯದ ಬಂಡಿಜಾಡಿನೊಳಗೆ ಚಲಿಸಲು ನಿರಾಕರಿಸಿದಾಗ, ನಿಮ್ಮ ಪ್ರೀತಿಯ ಕೆಲಸ ಯಾವುದೆಂದು ಕಂಡು ಕೊಳ್ಳುವ ಸಾಧ್ಯತೆ ಇದೆ. ಆದ್ದರಿಂದ ಈ ಬಗೆಯ ತಿಳಿವು ಮೂಡಲು, ಸಂಪಾದನೆಯಿಲ್ಲದೆ ಬದುಕುವುದು ಹೇಗೆ ಎಂಬ ಭಯ ಹೋಗಬೇಕು. ನಮ್ಮ ಪೈಕಿ ಅನೇಕರಲ್ಲಿ ಈ ಭಯ ತುಂಬಿಕೊಂಡಿರುತ್ತದೆ. ನಮ್ಮ ತಂದೆ-ತಾಯಿಯರ ಮಾತು ಕೇಳದೆ ಇದ್ದರೆ ಈ ಸಮಾಜದ ಜೊತೆ ಹೊಂದಾಣಿಕೆ ಮಾಡಿಕೊಳ್ಳದೆ ಇದ್ದರೆ, ನನ್ನ ಗತಿ ಏನು? ಇದು ನಮ್ಮ ನಿರಂತರವಾದ ಆತಂಕ. ಭಯಗ್ರಸ್ತರಾದ ನಾವು ವಿಧೇಯತೆಯಿಂದ ವರ್ತಿಸುತ್ತೇವೆ. ಅಂಥ ಕ್ರಿಯೆಯಲ್ಲಿ ಪ್ರೀತಿಯಿರುವುದಿಲ್ಲ. ಅಲ್ಲಿರುವುದು ಒಳಗೆ ಅಡಗಿರುವ ಪರಸ್ಪರ ವಿರೋಧ ಮಾತ್ರ. ಇದು ವಿನಾಶಮಾಡುವ ಮಹತ್ವಾಕಾಂಕ್ಷೆಯ ಮುಖ್ಯ ಕಾರಣಗಳಲ್ಲಿ ಒಂದು.

# ಕನ್ನಡದಲ್ಲಿ ಲಭ್ಯವಿರುವ ಜೆ.ಕೃಷ್ಣಮೂರ್ತಿ ಪುಸ್ತಕಮಾಲೆ

**೧. ಜೆ.ಕೆ. ಜೀವನ – ದರ್ಶನ** ರೂ.೧೩೦/-
ಅನು. ಡಾ. ನಿ. ಮುರಾರಿ ಬಲ್ಲಾಳ

**೨. ಧ್ಯಾನ ಚಿಂತನ** ರೂ. ೫೦/-
ಅನು. ಡಾ. ನಿ. ಮುರಾರಿ ಬಲ್ಲಾಳ

**೩. ಶಿಕ್ಷಣ ಮತ್ತು ಜೀವನ** ರೂ. ೬೫/-
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್

**೪. ಅನುದಿನ ಚಿಂತನ** ರೂ.೪೦೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

**೫. ಹಿಂಸೆಯನ್ನು ಮೀರಿ** ರೂ.೧೫೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

**೬. ಭಯ, ಸ್ವಾತಂತ್ರ್ಯ ಮತ್ತು ಶಿಕ್ಷಣ** ರೂ.೨೦/-
ಅನು. ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ

**೭. ಬಾಳಿಗೊಂದು ಭಾಷ್ಯ - ಸಂಪುಟ ೧** ರೂ.೩೨೦/-
ಅನು. ಡಾ. ಮಹಾಬಲೇಶ್ವರ ರಾವ್

**೮. ಬಾಳಿಗೊಂದು ಭಾಷ್ಯ - ಸಂಪುಟ ೨** ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

**೯. ಬಾಳಿಗೊಂದು ಭಾಷ್ಯ - ಸಂಪುಟ ೩** ರೂ.೧೮೫/-
ಅನು. ಡಾ. ಮಹಾಬಲೇಶ್ವರ ರಾವ್

**೧೦. ಮೊದಲ ಹಾಗೂ ಕೊನೆಯ ಬಿಡುಗಡೆ** ರೂ.೩೫೦/-
ಅನು. ರುಕ್ಮಿಣಿ ಕೃಷ್ಣಮೂರ್ತಿ

**೧೧. ಭಯ ನಿಮಗೇನು ಮಾಡೀತು?** ರೂ.೪೦/-
ಅನು. ಎಸ್. ದಿವಾಕರ್

**೧೨. ಇನ್ನೊಬ್ಬರ ಬಗ್ಗೆ ಕಾಳಜಿ - ಹಾಗೆಂದರೇನು?** ರೂ.೪೦/-
ಅನು. ಪ್ರೊ.ಎಚ್.ಎಸ್.ರಾಘವೇಂದ್ರ ರಾವ್

**೧೩. ಸ್ವಾತಂತ್ರ್ಯ ಎಂದರೇನು?** ರೂ.೪೦/-
ಅನು. ಗಿರೀಶ್ ವಾಘ್

**೧೪. ಶಿಕ್ಷಣ** ರೂ.೯೦/-
ಅನು. ಎಸ್.ಡಿ. ಕಾಶೀಕರ

**೧೫. ಬದುಕಿನ ಕಡೆಗೆ** ರೂ.೧೪೦/-
ಅನು. ಎಸ್.ಡಿ. ಕಾಶೀಕರ ಮತ್ತು
ವನಮಾಲಾ ಆರ್. ರಾವ್

**೧೬. ನೀವೇ ಲೋಕ, ನಿಮ್ಮೊಳಗೇ ಲೋಕ** ರೂ. ೧೦೦/-
ಅನು. ಡಾ. ಮಹಾಬಲೇಶ್ವರ ರಾವ್

**೧೭. ಒಲವು ಒಂಟಿತನ** ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

**೧೮. ಸಂಕಷ್ಟಮಯ ಜಗತ್ತಿನ ಜೊತೆ ಮುಖಾಮುಖಿ** ರೂ.೧೫೦/-
ಅನು. ಡಾ. ಮಹಾಬಲೇಶ್ವರ ರಾವ್

**೧೯. ಒಳಜಗತ್ತು** ರೂ.೧೮೦/-
ಅನು. ಡಾ. ಮಹಾಬಲೇಶ್ವರ ರಾವ್

**೨೦. ಸಾಮಾಜಿಕ ಜವಾಬ್ದಾರಿ** ರೂ.೧೧೦/-
ಅನು. ಡಾ. ಮಹಾಬಲೇಶ್ವರ ರಾವ್

**೨೧. ಶಿಕ್ಷಕನಿಗೆ ಶಿಕ್ಷಣ** ರೂ. ೫೦/-
ಅನು. ಡಾ. ಬಿ.ಬಿ. ರಾಜಪುರೋಹಿತ್

**೨೨. ನಿಮ್ಮ ಜೀವನ ನಿಮ್ಮ ಕೈಯಲ್ಲಿದೆಯೆ?** ರೂ.೨೦೦/-
ಅನು. ಡಾ. ಮಹಾಬಲೇಶ್ವರ ರಾವ್

**೨೩. ಲೋಕ ಶಿಕ್ಷಕ** ರೂ.೨೫೦/-
ಅನು. ಡಾ. ಮಹಾಬಲೇಶ್ವರ ರಾವ್

**೨೪. ಕೃಷ್ಣಮೂರ್ತಿ ಆತ್ಮಸಂಗಾತ** ರೂ.೧೩೦/-
ಅನು. ಡಾ. ಮಹಾಬಲೇಶ್ವರ ರಾವ್

**೨೫. ಮುಗಿದ ಶಾಲೆ ತೆರೆದ ಜೀವನ** ರೂ.೨೧೦/-
ಅನು. ಡಾ. ಮಹಾಬಲೇಶ್ವರ ರಾವ್

**೨೬. ಈ ಸಂಗತಿ ಕುರಿತು ಆಲೋಚನೆ ಮಾಡಿ** ರೂ.೩೫೦/-
ಅನು. ಎಚ್ ಎಸ್ ರಾಘವೇಂದ್ರರಾವ್

## *ನಮ್ಮಲ್ಲಿ ಪುಸ್ತಕಗಳು ರಿಯಾಯಿತಿ ಬೆಲೆಗಳಲ್ಲಿ ಲಭ್ಯವಿರುತ್ತವೆ.*

- ಕನ್ನಡ ಪುಸ್ತಕಗಳು ೨೦% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- ಆಂಗ್ಲ ಪುಸ್ತಕಗಳು ೪೦% ರಿಯಾಯಿತಿ ಬೆಲೆಯಲ್ಲಿ ಸಿಗುತ್ತವೆ.
- KFI ಪ್ರಕಟಿತ ಕನ್ನಡ ಪುಸ್ತಕಗಳು ೫೦% ರಿಯಾಯಿತಿಯಲ್ಲಿ ಲಭ್ಯವಿರುತ್ತವೆ.

**ಕನ್ನಡ ಭಾಷಾಂತರ ಸಮಿತಿ ಸದಸ್ಯರು:**
ಡಾ॥ ಎಚ್. ಎಸ್. ರಾಘವೇಂದ್ರರಾವ್
ಪ್ರೊ॥ ಓ. ಎಲ್. ನಾಗಭೂಷಣ ಸ್ವಾಮಿ
ಡಾ॥ ವನಮಾಲಾ ವಿಶ್ವನಾಥ್

**Published by:**
Editor: Arun N Haunshi
The Study Bengaluru Education Centre
Krishnamurti Foundation India
Thataguni post, Bengaluru-560082

**Contact Information:**
Mob: 8317419451
Email: kfistudy@gmail.com
Website: www.kfistudy.org